ವಿಚಾರ. ನನ್ನ ಗಮನ ಸೆಳೆಯುವ ಸೂಚನೆಯಲ್ಲಿ ಆ ವಿಚಾರವನ್ನು ಕೊಟ್ಟಿಲ್ಲ. ೨೦ ಜನ ಅಧ್ಯಾಪಕರು ಸತ್ಯಾಗ್ರಹ ಮಾಡುತ್ತಿರುವ ಬಗ್ಗೆ ನಾನು ಗಮನಪತ್ರವನ್ನು ಸೆಳೆದಿಲ್ಲ. ನನ್ನ ಗಮನ ಸೆಳೆಯುವ ಸೂಚನೆಯಲ್ಲಿ ಖಾಸಗಿ ಶಾಲಾ ಅಧ್ಯಾಪಕರ ಚಿಂತಾಜನಕ ಪರಿಸ್ಥಿತಿ ಕುರಿತಂತೆ ಮತ್ತು ಈ ಅಧ್ಯಾಪಕರ ಉಪವಾಸ ಸತ್ಯಾಗ್ರಹ ಕುರಿತಂತೆ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಆದುದರಿಂದ ಮಂತ್ರಿಗಳ ಹೇಳಿಕೆ ಒಂದು ಪಾರ್ಟಿಗೆ ಮಾತ್ರ ಸಂಬಂಧಪಟ್ಟಿದ್ದು. ೨೦ ಜನ ಅಧ್ಯಾಪಕರು ಏನೂ ನೋಟೀಸ್ ಕೊಡದೆ ಉಪವಾಸ ಸತ್ಯಾಗ್ರಹಕ್ಕೆ ಕುಳಿತಿರಬಹುದು. ಆದರೆ ಇಡೀ ಖಾಸಗೀ ಶಾಲಾ ಅಧ್ಯಾಪಕರ ತೊಂದರೆಗಳ ಬಗ್ಗೆ ನಾನು ಗಮನ ಸೆಳೆದಿದ್ದೇನೆ. ಆದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿಕೆ ಕೊಟ್ಟಿಲ್ಲ. ಅದನ್ನು ಮರೆತುಬಿಟ್ಟಿದ್ದಾರೆ. ಖಾಸಗಿ ಶಾಲಾ ಅಧ್ಯಾಪಕರನ್ನು ಶೋಷಣೆ ಮಾಡುತ್ತಾ ಇರತಕ್ಕಂಥ ಆಡಳಿತ ವರ್ಗವನ್ನು ತಾವು ಹೇಗೆ ಮುಷ್ಟಿಯಲ್ಲಿ ಇಟ್ಟುಕೊಳ್ಳುತ್ತೀರಿ ಎನ್ನತಕ್ಕ ವಿಚಾರ ನಮಗೆ ಬೇಕಾಗಿದೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಕಾಂಪ್ರಹೆನ್ಸಿವ್ ಲೆಲ್ ತರುತ್ತೇನೆಂದು ಹೇಳಿದರು, ಅಲ್ಲಿಯವರೆಗೆ ಆಡಳಿತ ವರ್ಗ ಈ ಅಧ್ಯಾಪಕರನ್ನು ಶೋಷಣೆ ಮಾಡುತ್ತಾ ಇರುತ್ತದೆ. ಇವರನ್ನು ಹೇಗೆ ಹತೋಟಿಯಲ್ಲಿ ತರುತ್ತೀರಿ ಎನ್ನುವ ಬಗ್ಗೆ ತಾವು ಉತ್ತರ ಕೊಟ್ಟಿಲ್ಲ. ಕೇವಲ ೨೦ ಜನ ಹಂಗರ್ ಸ್ಟ್ರೈಕ್ ಕುಳಿತಿದ್ದಾರೆ, ನಮಗೆ ನೋಟೀಸ್ ಕೊಟ್ಟಿಲ್ಲ ಆಶ್ವಾಸನೆ ಕೊಟ್ಟಿಲ್ಲ ಎಂದು ಹೇಳಿದಿರಿ. ಇದರ ಬಗ್ಗೆ ತಮ್ಮ ಧೋರಣೆಯನ್ನು ಸ್ಪಷ್ಟವಾಗಿ ತಿಳಿಸಬೇಕು.

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಸದಸ್ಯರು ಸರಿಯಾಗಿ ಆರ್ಥ ಮಾಡಿಕೊಳ್ಳಲಿಲ್ಲ ಎಂದು ಕಾಣುತ್ತದೆ. ಉಪವಾಸ ಸತ್ಯಾಗ್ರಹದ ಬಗ್ಗೆ ತಮ್ಮ ಬೇಡಿಕೆಗಳ ಬಗ್ಗೆ ಸರ್ಕಾರಕ್ಕೆ ತಿಳಿಸಬೇಕಾಗಿತ್ತು. ಆ ಬಗ್ಗೆ ನಾವು ಈ ವಿಷಯದಲ್ಲಿ ಉತ್ತರ ಹೇಳುವುದು ಸರಿ. ತಾವು ಆವರು ಸತ್ಯಾಗ್ರಹದ ಬಗ್ಗೆ ತಿಳಿಸುವುದು ಬಿಟ್ಟು ಇಡೀ ಇಲಾಖೆಗೆ ಸಂಬಂಧಪಟ್ಟ ಬೇರೆ ಬೇರೆ ಡಿಮ್ಯಾಂಡ್‌ಗಳನ್ನು ಸಭೆಯ ಮುಂದಿಟ್ಟರೆ ಅದರ ಬಗ್ಗೆ ಉತ್ತರ ಹೇಳುವುದಕ್ಕೆ ಕಷ್ಟವಾಗುತ್ತದೆ. ಅದನ್ನು ಬಜೆಟ್ ಭಾಷಣದಲ್ಲಿ ಬೇಳಿದರೆ ಉತ್ತರ ಕೊಡೋಣ.

MR. SPEAKER —The trend of the discussion is like a budget debate. The reply is of a general nature. The Hon. Member may speak later on when the Demands of the Department comes before the House, for discussion. Now I call upon Sri M. S. Atmananda to raise his matter.

((iii) ಮಂಡ್ಯನಗರದಲ್ಲಿ ದಿನಾಂಕ ೧೮ನೇ ಫೆಬ್ರುವರಿ ೧೯೮೦ ರಂದು ನಡೆದ ಬೆಂಕಿ ಅನಾಹುತ.)

ಶ್ರೀ ಎಂ. ಎಸ್. ಆತ್ಮಾನಂದ.—ಸಭಾಧ್ಯಕ್ಷರೇ, ಮಂಡ್ಯ ನಗರದಲ್ಲಿ ದಿನಾಂಕ ೧೮ನೇ ಫೆಬ್ರುವರಿ ೧೯೮೦ ರಂದು ನಡೆದ ಬೆಂಕಿ ಅನಾಹುತದ ಬಗ್ಗೆ ನಾನು ಸನ್ಮಾನ್ಯ ಕಂದಾಯ ಮತ್ತು ಕೃಷಿ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ (ಹಣಕಾಸಿನ ಹಾಗೂ ಸಹಕಾರ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಮತ್ತು ಕೃಷಿ ಸಚಿವರ ಪರವಾಗಿ ಈ ಸ್ಟೇಟ್‌ಮೆಂಟನ್ನು ಮಾಡುವುದಕ್ಕೆ ತಮ್ಮ ಅನುಮತಿಯನ್ನು ಕೇಳುತ್ತೇನೆ.

on account of an accidental fire that occured on 18th February 1980 at about 6.15 pm. in Monday City. 42 huts situated behind the Nanda Talkies were completely destroyed rendering all inmates of the huts destitutes. The fire was put out with the help of local volunteers and the fire engine sent from Mysore. No injury or loss to human and cattle life has been reported Arrangements have been made to guard the area pending salvage of damaged property, if any. Arrangements were also made to provide temporary shelter and food for the victims. The estimated loss is about Rs. 1,70,564/-.

The victims of the fire accident have been sanctioned cash relief totalling Rs. 31,692/- 40 to families in all ranging from Rs. 620/- to Rs. 800 - to each family by the Deputy Commissioner, Mandya district, Mandya on 21st February 1980. Action is also being taken by him to grant building materials to the victims to rebuild their huts.

ಶ್ರೀ ಎಂ. ಎಸ್. ಆತ್ಮಾನಂದ.—ಸಭಾಧ್ಯಕ್ಷರೇ, ಮಾನ್ಯ ಸಚಿವರು ಉತ್ತರ ಕೊಡುತ್ತಾ ಕೊನೆಯಲ್ಲಿ "Action is also being taken by him to grant building materials to the victims to rebuild their huts", ಎಂದು ಹೇಳಿದ್ದಾರೆ. ಈ ಅನಾಹುತವಾಗಿ ೧೫ ದಿವಸ ಆಯಿತು. ಅವರು ಮನೆಯಿಲ್ಲದೆ ಬೀದಿಯಲ್ಲಿ ಬಿದ್ದಿದ್ದಾರೆ. ಒಂದನೆಯದಾಗಿ ಇನ್ನು ಎಷ್ಟು ದಿವಸಗಳಲ್ಲಿ ಮನೆ ಕಟ್ಟಲು ಅವರಿಗೆ ಸರ್ಕಾರದಿಂದ ಸಲಕರಣೆಗಳನ್ನು ಒದಗಿಸುತ್ತೀರಿ. ಎರಡನೆಯದಾಗಿ, ಈ ಅನಾಹುತವಾಗಿ ಬಹಳ ನಷ್ಟವಾಗಿರುವುದರಿಂದ ಬ್ಯಾಂಕಿನಿಂದ ಸುಲಭ ಬಡ್ಡಿ ದರದಲ್ಲಿ ಸಾಲ ವನ್ನೇನಾದರೂ ಸರ್ಕಾರದ ವತಿಯಿಂದ ಕೊಡಿಸುವುದಕ್ಕೆ ಸಾಧ್ಯವಾಗುತ್ತದೆಯೇ ಎಂದು ಕೇಳುತ್ತೇನೆ. ಮಂಡ್ಯ ನಗರ ಒಂದು ಜಿಲ್ಲಾ ಕೇಂದ್ರವಾಗಿದ್ದು ಅಲ್ಲಿ ಒಂದು ಅಗ್ನಿ ಶಾಮಕದಳ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ತೀವ್ರಗತಿಯಲ್ಲಿ ಇದನ್ನು ಪ್ರಾರಂಭ ಮಾಡುವುದಕ್ಕೆ ಸರ್ಕಾರ ಯೋಚನೆ ಮಾಡುತ್ತದೆಯೇ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಅಲ್ಲಿಗೆ ಬಿಲ್ಡಿಂಗ್ ಮೆಟೀರಿಯಲ್ಸ್‌ನ್ನು ತಕ್ಷಣ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಇನ್ನು ಕಡಿಮೆ ದರದಲ್ಲಿ ಸಾಲವನ್ನು ಮತ್ತು ಅಲ್ಲಿಗೆ ಒಂದು ಅಗ್ನಿ ಶಾಮಕ ದಳವನ್ನು ಕೊಡಬೇಕೆಂದು ಮಾನ್ಯ ಸದಸ್ಯರು ಏನು ಸೂಚನೆ ಕೊಟ್ಟಿದ್ದಾರೆ ಅದನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳುತ್ತದೆ.

Matter Under Rule 312

re.—Scarcity of Silk Yarn

ಬಿ. ವಿ. ರಾಮಚಂದ್ರರೆಡ್ಡಿ.—ಅಧ್ಯಕ್ಷರು ಆಬ್ಸೆಂಟ್. ನೆಕ್ಸ್ಟ್ ಮ್ಯಾಟರ್ ಅಂಡರ್ ರೂಲ್ ೩೧೨, ಶ್ರೀಮತಿ ಎಸ್. ಪ್ರಮೀಳಾ ಮತ್ತು ಶ್ರೀ ಹೆಚ್. ಗಂಗಾಧರನ್.

ಶ್ರೀಮತಿ ಎಸ್. ಪ್ರಮೀಳಾ.—ಮಾನ್ಯ ಅಧ್ಯಕ್ಷರೇ, ಕರ್ನಾಟಕದಲ್ಲಿ ಈ ಸಿಲ್ಕ್ ಎಕ್ಸ್‌ಚೇಂಜನ್ನು ತಂದಿರುವುದರಿಂದ ಏನಾಗಿದೆ ಎಂದರೆ ಇಡೀ ಕರ್ನಾಟಕದಲ್ಲಿರತಕ್ಕ ಎಲ್ಲಾ ನೇಕಾರರಿಗೂ ಇಲ್ಲಿರತಕ್ಕ ಹ್ಯಾಂಡ್‌ಲೂಮ್ ಮತ್ತು ಪವರ್ ಮಿಲ್ಸ್‌ನವರು ಮುಚ್ಚತಕ್ಕ ಪ್ರಸಂಗ ಬಂದು ಅದರಿಂದ ಅದನ್ನೇ ಆವಲಂಭಿಸಿರತಕ್ಕಂಥ ಜನಗಳು ಬಹಳ ಕಷ್ಟವನ್ನು ಅನುಭವಿಸತಕ್ಕಂಥ ಪ್ರಸಂಗ ಉಂಟಾಗಿದೆ, ಸೆಂಟ್ರಲ್ ಸಿಲ್ಕ್ ಬೋರ್ಡ್‌ನವರು ಈ ಸಿಲ್ಕ್ ಎಕ್ಸ್‌ಚೇಂಜ ತರುವುದರಿಂದ ಬಹಳ ಅನಾನುಕೂಲವಾಗುತ್ತದೆಂದು ಹೇಳಿದ್ದರೂ ಕೂಡ, ಇದರಿಂದ ಅನುಕೂಲವಾಗುತ್ತದೆಂದು ಹೇಳಿ ನಮ್ಮ ಕರ್ನಾಟಕದಲ್ಲಿ ಮಾತ್ರ ಈ ರೀತಿಯ ಒಂದು ಸಿಲ್ಕ್ ಎಕ್ಸ್‌ಚೇಂಜನ್ನು ನಮ್ಮ ಬೆಂಗಳೂರಿನಲ್ಲಿ ತಂದಿದ್ದಾರೆ. ಇದರಿಂದ ಏನಾಗಿದೆ ಎಂದರೆ ೪ ಪರ್ಸೆಂಟ್‌ನಷ್ಟು ಟ್ಯಾಕ್ಸ್ ಬೀಳುತ್ತಿದೆ. ತೆಗೆದುಕೊಳ್ಳುವವರಿಗೆ ಎರಡೂ ಪರ್ಸೆಂಟ್, ಕೊಡುವವರಿಗೆ ಎರಡು ಪರ್ಸೆಂಟ್ ಟ್ಯಾಕ್ಸ್ ಬೀಳುತ್ತಿದೆ. ಇದರಿಂದ ಸಹಸ್ರಾರು ನೇಕಾರರು ಇವತ್ತಿನ ದಿವಸ ಪವರ್ ಲೂಮ್‌ಗಳನ್ನು ಮುಚ್ಚಿ ಕೆಲಸ ಮಾಡದೇ ಇರತಕ್ಕಂಥ ಪರಿಸ್ಥಿತಿಯನ್ನು ತಂದೊಡ್ಡಿದ್ದೀರಿ. ೧೯೪೩ನೇ ಇಸ್ವಿಯಲ್ಲಿ ಪ್ಯಾರಾಚೂಟ್ ಮಾಡತಕ್ಕ ಕಾಲದಲ್ಲಿ ಇದೇ ರೀತಿ ಕಾನೂನು ತಂದಿದ್ದರು, ಆಗಲೂ ಸಹ ಅದರಿಂದ ತೊಂದರೆಯಾಗುತ್ತದೆಂದು ಕಂಡುಬಂದಾಗ ತೆಗೆದು ಹಾಕಿದರು. ಈ ಕಾನೂನು ನಮ್ಮ ಪಕ್ಕದ ರಾಜ್ಯಗಳಾದ ಮದ್ರಾಸ್ ಮತ್ತು ಆಂಧ್ರಪ್ರದೇಶಗಳಲ್ಲಿ ಇಲ್ಲ. ಇದು ಕೇವಲ ನಮ್ಮ ಕರ್ನಾಟಕ ರಾಜ್ಯದಲ್ಲಿ ಮಾತ್ರ ಜಾರಿಗೆ ತಂದಿದ್ದಾರೆ. ಇದರಿಂದ ೪ ಪರ್ಸೆಂಟನಷ್ಟು ಟ್ಯಾಕ್ಸ್ ಬೇರೆ ಹೆಚ್ಚಿನ ಹೊರೆ ಬೀಳುತ್ತಿದೆ. ಮತ್ತೆ ಈ ಆಕ್ಟ್‌ನಿಂದ ಯಾರಾದರೂ ಲೈಸನ್ಸ್ ಇಲ್ಲದೇ ಅಥವಾ ಪರ್ಮಿಷನ್ ಇಲ್ಲದ ಮಾರಾಟ ಮಾಡಿದ್ದರೆ ಅಂಥವರನ್ನು ೩ ವರ್ಷಗಳ ಕಾಲ ಜೈಲಿಗೆ ಹಾಕಬೇಕೆಂದು ಮಾಡಿದ್ದೀರಿ.